ಶ್ರೀ ಪ್ರಕಾಶ್.ಭಾ.ಹುಕ್ಕೇರಿ(ಕೃಷಿ ಮಾರುಕಟ್ಟೆ ಸಚಿವರು):

ಅ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ನಿಯಂತ್ರಣ) ಅಧಿನಿಯಮ 1966ರ ನಿಯಮ 62(2)ರನ್ವಯ ಸರ್ಕಾರದ ಅಧಿಸೂಚನೆ ಸಂ:ಸಿಎಂಡ್ಲ್ಯು:171:ಇಎಂಡಿ:95, ದಿ:04/06/96ರಲ್ಲಿ ಮಾರುಕಟ್ಟೆ ಇಲಾಖೆ ಸೇವೆ ಮತ್ತು ಮಾರುಕಟ್ಟೆ ಸಮಿತಿ ಸೇವೆ ಎರಡು ಸೇವೆಗಳನ್ನು ಒಂದುಗೂಡಿಸಿ ಒಂದೇ ಸೇವೆಯಾಗಿ ವಿಲೀನಗೊಳಿಸಿ ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಸೇವೆ (ಸಂಯೋಜನೆ) ನಿಯಮಾವಳಿ 1996 ಹೊಸದಾಗಿ ದಿ:27/06/95 ರಿಂದ ಆಸ್ಥಿತ್ವಕ್ಕೆ ಬಂದಿರುತ್ತದೆ. ಕೃಷಿ ಮಾರಾಟ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳ ಕರಡನ್ನು ರಚಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆ) ಆದೇಶ ಸಂಖ್ಯೆ:ಎಸ್ಎಂಡಿ: 273:ಇಎಸ್ಟಿ:96 ದಿ:30/07/96ರಲ್ಲಿ ಕಾರ್ಯಕಾರಿ ಆದೇಶ ಸಂ:ಆರ್ಡಿ:ಸಿ:100:ಸಿಎಂಡಿ:74 ದಿ:30/10/75 ರನ್ವಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರಿಗೆ 1:1ರ ಅನುಪಾತದಲ್ಲಿ 39ಬೆರಳಚ್ಚುಗಾರರಿಗೆ ನೇರವಾಗಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ.

ಇ) ಕಾರ್ಯಕಾರಿ ಆದೇಶ ಸಂ:ಆರ್ಡಿ:ಸಿ:100:ಸಿಎಂಡಿ:74 ದಿ:30/10/75ರನ್ವಯ ಬೆರಳಚ್ಚುಗಾರರಿಗೆ ಪ್ರಥಮ ದರ್ಜೆ ಸಹಾಯಕರ ಪದವ್ಯಂದಕ್ಕೆ ಪದೋನ್ನತಿ ಹೊಂದುವ ಅವಕಾಶ ಕಲ್ಪಿಸಿರುವುದರಿಂದ ಸದರಿ ಪದವ್ಯಂದಕ್ಕೆ ನಿಗದಿ ಪಡಿಸಲಾದ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗ ಬೇಕಾಗಿರುತ್ತದೆ. ಕಾರಣ ನಿಯಮ ಉಲ್ಲಂಘಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

1437(1726) ಶ್ರೀ ದಿಗಂಬರ್ ಯಶವಂತರಾವ್ ಪಾಟೀಲ್ (ಖಾನಾಪುರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೇ;

ಆ) ಹಾಗಿದ್ದಲ್ಲಿ ಈ ಬಗೆಗಿನ ನಿಯಮ 64 ಅಡಿಯಲ್ಲಿ ವಿಚಾರಣೆ ಸರ್ಕಾರದಲ್ಲಿ ಈಗ ಯಾವ ಹಂತದಲ್ಲಿದೆ;

ಇ) ಕಾರ್ಖಾನೆಯ ಅವ್ಯವಹಾರದಲ್ಲಿ ಪಾಲ್ಗೊಂಡ ಸದಸ್ಯರುಗಳು ಯಾರು;

ಈ) ಅವರ ಮೇಲೆ ಸರ್ಕಾರ ಯಾವ ಮಟ್ಟದ ವಿಚಾರಣೆಯನ್ನು ನಡೆಸಿದೆ;

ಉ) ಅದು ಯಾವಾಗ ಕೊನೆಗೊಳ್ಳುವುದು?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಆ) ವಿಚಾರಣೆಗಳು ಪೂರ್ಣಗೊಂಡಿರುತ್ತದೆ.

ಇ) ಆಡಳಿತಮಂಡಳಿಯ ಸದಸ್ಯರುಗಳು, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕಾರ್ಖಾನೆಯ ನೌಕರರು ಸೇರಿದಂತೆ ಒಟ್ಟು 79 ಜನರು ಈ ಅವ್ಯವಹಾರದಲ್ಲಿ ಭಾಗಿಯಾಗಿರುತ್ತಾರೆ.

ಈ) ಮತ್ತು ಉ) ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64ರಡಿ ವಿಚಾರಣೆಯನ್ನು ಕೈಗೊಳ್ಳಲಾಗಿದೆ ಮತ್ತು ಸರ್ಕಾರವು ಸಿ.ಒ.ಡಿ. ತನಿಖೆಗೆ ದಿನಾಂಕ 6-1-2004ರಂದು ಆದೇಶಿಸಿರುತ್ತದೆ. ಕಲಂ 64 ರಡಿ 2 ವಿಚಾರಣೆಗಳು ಪೂರ್ಣಗೊಂಡಿರುತ್ತದೆ.

1438(1727) ಶ್ರೀ ಶ್ರೀ ದಿಗಂಬರ ಯಶವಂತರಾವ್ ಪಾಟೀಲ್ (ಖಾನಾಪುರ) ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾನಾಪುರ ತಾಲ್ಲೂಕಿನಲ್ಲಿ ಅಂಗವಿಕಲರು ಮತ್ತು ಅಂಗವಿಕಲರ ಮಕ್ಕಳ ಅಭಿವೃದ್ಧಿಗಾಗಿ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ;

ಆ) ಈ ಪೈಕಿ ಜಾರಿಯಲ್ಲಿರುವ ಯೋಜನೆಗಳೆಷ್ಟು?

ಶ್ರೀಮತಿ. ಭಾಗೀರಥಿ ಮರುಳಸಿದ್ದನಗೌಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಅ) ಸರ್ಕಾರವು ಅಂಗವಿಕಲರ ಮತ್ತು ಅಂಗವಿಕಲ ಮಕ್ಕಳ ಅಭಿವೃದ್ಧಿಗಾಗಿ ಜಾರಿಗೊಳಿಸುತ್ತಿರುವ ಎಲ್ಲಾ ಯೋಜನೆಗಳನ್ನು ಖಾನಾಪುರ ತಾಲ್ಲೂಕಿನಲ್ಲಿಯೂ ಜಾರಿಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಎಲ್ಲಾ ಯೋಜನೆಗಳೂ ಜಾರಿಯಲ್ಲಿರುತ್ತವೆ.

ಅನುಬಂಧ-1

ಖಾನಾಪುರ ತಾಲ್ಲೂಕಿನಲ್ಲಿನ ಅಂಗವಿಕಲರಿಗೆ ಸರ್ಕಾರವು ಒದಗಿಸುತ್ತಿರುವ ಸೌಲಭ್ಯಗಳ ಮಾಹಿತಿಯು ಈ ಕೆಳಕಂಡಂತಿದೆ.

1. ಒಂದನೆ ತರಗತಿಯಿಂದ ವಿಶ್ವವಿದ್ಯಾನಿಲಯದ ಶಿಕ್ಷಣ ಮಟ್ಟದಲ್ಲಿ ಓದುತ್ತಿರುವ ಅರ್ಹ ಅಂಗವಿಕಲ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.
2. ಪ್ರತಿಭಾವಂತ ಅಂಗವಿಕಲ ಮಕ್ಕಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
3. ರಾಜ್ಯದಲ್ಲಿರುವ ಎಲ್ಲಾ ಅಂಧ ಮಕ್ಕಳಿಗೆ ಬೇಕಾಗಿರುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಉಚಿತವಾಗಿ ನೀಡಲಾಗುತ್ತಿದೆ.
4. ಪಿ.ಯು.ಸಿ ಮತ್ತು ಬಿ.ಎ ತರಗತಿಗಳಲ್ಲಿ ಓದುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಆಡಿಯೋ ಕ್ಯಾಸೆಟ್‌ಗಳನ್ನು ಮುದ್ರಿಸಿ ಟೆಪ್ ರೆಕಾರ್ಡರ್ ಸಹಿತ ಪ್ರಾಂಶುಪಾಲರ ಮೂಲಕ ನೀಡಲಾಗುತ್ತಿದೆ.
5. ರಾಜ್ಯ ಸರ್ಕಾರವು ಸಿ ಮತ್ತು ಡಿ ಹುದ್ದೆಗಳಲ್ಲಿ ಅಂಗವಿಕಲರಿಗೆ ಶೇ. 5 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.
6. ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆಯಡಿ ಧನಸಹಾಯ
7. ದೂರವಾಣಿ ಬೂತುಗಳನ್ನು ಅಂಗವಿಕಲರಿಗೆ ಸ್ವಯಂ ಉದ್ಯೋಗ ಕಲ್ಪಿಸಿ ಕೊಡಲು ನೀಡಲಾಗುತ್ತಿದೆ.
8. ಎನ್.ಹೆಚ್.ಎಫ್.ಡಿ.ಸಿ ಸಂಸ್ಥೆಯಿಂದ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
9. ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.
10. ಅಂಗವಿಕಲತೆಯನ್ನು ಶಸ್ತ್ರ ಚಿಕಿತ್ಸೆಯಿಂದ ನಿವಾರಿಸಲು ವೈದ್ಯಕೀಯ ಶಸ್ತ್ರ ಚಿಕಿತ್ಸೆಗಾಗಿ ಧನಸಹಾಯ ನೀಡಲಾಗುತ್ತಿದೆ.